"ಶಶಿಗೆ ಹಾರೋ ಆಸೆ. ಆ ಮರದ ಮೇಲೆ ಹೆಂಗೆ ಕೂತಾಳೆ ನೋಡು" ಎಂದು ಒಂದು ದಿನ ಆಕಾಶದ ಕಡೆ ತೋರಿಸಿದ. ರೆಕ್ಕೆಯ ಕಟಿಂಗ್ ನಿಲ್ಲಿಸಿದ ಕಾರಣ ಶಶಿ ಒಂದಷ್ಟು ಹಾರಾಡುವುದನ್ನು ಕಲಿತಿದ್ದಳು. ಹೀಗಾಗಿ ಆಕೆ ಹಾರಿ ನಮ್ಮ ಮನೆಯ ತೆಂಗಿನ ಮರದ ತುದಿಯಲ್ಲಿ ಕೂತಿದ್ದಳು. ಕುಮಾರ ಅವಳಿಗೂ ತನಗೂ ಅದೆಷ್ಟು ಮಧುರ ಹೊಂದಾಣಿಕೆ ಇದೆಯೆಂದು ತೋರಿಸಲು, "ಶಶಿ ಬಾ... ಶಶಿ ಬಾ..." ಎಂದು ಕೈ ಚಾಚಿ ಕೂಗಿದ. ಅದು ಅತ್ತಿಂದಿತ್ತ ನೋಡುತ್ತಾ ಸುಮಾರು ಹೊತ್ತು ಕೂತಿತ್ತು. ನಂತರ ಏನು ತಿಳಿಯಿತೋ ಥಂಗನೆ ಹಾರಿ ಬಂದು ಕುಮಾರನ ಹೆಗಲ ಮೇಲೆ ಕೂತಿತು. "ನೋಡ್ರೋ ನನ ಮಕ್ಕಳಾ. ನನ್ನ ಶಶಿ ನಿಯತ್ತು" ಎಂದು ಅವಳನ್ನೆತ್ತಿ ಮುದ್ದಾಡಿ ಕೆಂಬಣ್ಣದ ದೊಣ್ಣೆ ಮೆಣಸಿನಕಾಯಿ ಕೊಟ್ಟ. ಶಶಿ ಸೊಗಸಾಗಿ ಕೂತು ಕಾಯನ್ನು ಪುಡಿಪುಡಿ ಮಾಡಿಕೊಂಡು ತಿಂದು ಅದರ ಕಸವನ್ನು ಕೆಳಗೆ ಕೆಡಹಿದಳು.

ಶಶಿ ಮರದ ಮೇಲೆ ಹೀಗೆ ದಿನಾ ಹೋಗಿ ಕೂರುವುದು, ಕುಮಾರ ಪರಿಪರಿಯಾಗಿ ಕರೆದು ಅವಳ ಒಲಿಸಿಕೊಂಡು ಸಂಭ್ರಮ ಪಡುವುದು ನಡೆದೇ ಇತ್ತು. ಒಂದು ದಿನ ಆಕೆ ತೆಂಗಿನ ಗರಿಗಳ ಮೇಲೆ ಕೂತು ಎಂದಿನಂತೆ ಕೂಗುತ್ತಿದ್ದಳು. ಅಷ್ಟರಲ್ಲಿ ಆಕಾಶದಲ್ಲಿ ರಭಸವಾಗಿ ಎತ್ತಲೋ ಹೋಗುತ್ತಿದ್ದ ಗಿಳಿಗಳ ದೊಡ್ಡ ಹಿಂಡಿಗೆ ಶಶಿಯ ದನಿ ಕೇಳಿಸಿರಬೇಕು. ತಮ್ಮ ವೇಗಕ್ಕೆ ಕಡಿವಾಣ ಹಾಕಿ ಮರದ ಮೇಲೆ ಗುಂಪಾಗಿ ಬಂದ ಆ ಸ್ವತಂತ್ರ ಗಿಳಿಗಳು ಶಶಿಯ ಸುತ್ತ ಬಂದು ಕೂತವು. ಅವುಗಳ ನಡುವೆ ಅದೇನೋ ಮಾತುಕತೆ ನಡೆಯತೊಡಗಿತು. "ನೋಡು ನನ್ನ ಶಶಿ ಹೇಗೆ ಎಲ್ಲರ ಜೊತೆ ಗೆಳೆತನ ಗಳಿಸಿಕೊಂಡಿದ್ದಾಳೆ" ಎಂದು ಕುಮಾರ ಮತ್ತೆ ಚಕಿತಗೊಂಡಿದ್ದ. ಮೇಲೆ ಚಿಲಿಪಿಲಿಯ ಗೊಂದಲದ ಸಭೆ ನಡೆಯುತ್ತಲೇ ಹೋಯಿತು. ಆ ಕ್ಷಣದಲ್ಲೇ ತೆಂಗಿನ ಮರದ ಮೇಲೆ ಕೂತಿದ್ದ ಗಿಳಿಗಳ ಗುಂಪು ಒಮ್ಮೆಲೇ ಆಕಾಶದ ಕರೆಯಾಲಿಸಿ ಹಾರಿ ಬಿಟ್ಟವು. ನೋಡಿದರೆ ಶಶಿಯೂ ಅವರ ಜೊತೆ ಹೊರಟೇ ಹೋಗಿದ್ದಳು. ಕೊಂಚವೂ ವಿಚಲಿತನಾಗದ ಕುಮಾರ, "ಎಲ್ಲರನ್ನು ಮಾತಾಡಿಸಿಕೊಂಡು ಶಶಿ ಮತ್ತೆ ಬರುತ್ತಾಳೆ" ಎಂದು ಸಂಜೆಯ ತನಕ ಕಾದ. ಆದರೆ, ಆಕೆ ಬರಲಿಲ್ಲ.

ಹೀಗೆ ಎರಡು ದಿನ ಕಳೆದವು. ಅಚ್ಚರಿಯೋ ಎಂಬಂತೆ ಶಶಿ ಬಂದು ಅದೇ ತೆಂಗಿನ ಮರದ ಗರಿಮೇಲೆ ಕೂತು ಕುಮಾರನ ನೋಡಿ ಕರೆದಳು. ಆತ ಸಂತಸದಿಂದ ಎದ್ದು ಬಂದು ಆಕೆಯನ್ನು ಕರೆದ. ನಾವೆಲ್ಲಾ ನಿಂತು ಈ ಚಮತ್ಕಾರ ನೋಡತೊಡಗಿದೆವು. ಕುಮಾರನ ಮಾತಿಗೆ ಸ್ಪಂದಿಸಿ ಶಶಿ ಕುಣಿದಾಡಿದಳು. ಆದರೆ, ಕೆಳಗೆ ಇಳಿಯಲಿಲ್ಲ. ಆಕೆಯ ಜತೆ ಕಾಡಿನ ಗಿಳಿಯೊಂದು ಬಂದು ಕೂತಿತ್ತು. "ನಮ್ಮನ್ನೆಲ್ಲಾ ತೋರಿಸಿ ಪರಿಚಯ ಮಾಡಿಕೊಡಲು ಕರ್ಕೊಂಡು ಬಂದಿದ್ದಾಳೆ ಶಶಿ" ಎಂದು ಕುಮಾರ ಪ್ರಶಂಸೆ ಮಾಡುತ್ತಲೇ ಇದ್ದ. ಮತ್ತೊಂದು ಕ್ಷಣದಲ್ಲೇ ಪುರ್ರೆಂದು ಹಾರಿದ ಶಶಿ ಇತ್ತ ನೋಡದೆ ಹೊರಟೇ ಹೋದಳು.

## ಕಲೀಮ್ ಉಲ್ಲಾ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳಿಂದ ಗುರುತಿಸಿಕೊಂಡಿದ್ದಾರೆ. 'ಪ್ರಜಾವಾಣಿ'ಯ 'ಕಾಮನಬಿಲ್ಲು' ಪುರವಣಿಯಲ್ಲಿ ಈ ಹಿಂದೆ ಅವರ 'ಕ್ಲಾಸ್ ಟೀಚರ್' ಎಂಬ ಅಂಕಣ ಪ್ರಕಟವಾಗಿತ್ತು. ಈ ಅಂಕಣ ಅದೇ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಪ್ರಸ್ತುತ ಅವರು ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರು.